


## ರುಚಿ ರುಚಿ ಅಡುಗೆ

ನ.3ರ ಮುಖಪುಟ ಲೇಖನ ಸುಧಾ ಹೆಗಡೆಯವರ 'ಪ್ರವಾಸದ ರುಚಿ' ವೈವಿಧ್ಯಮಯ ಊಟವನ್ನು ಪರಿಚಯಿಸಿದೆ. ಮುಖಪುಟ ವಿನ್ಯಾಸ,ಚಿತ್ರಗಳು, ಆಕರ್ಷಕವಾಗಿವೆ.

–ಎಚ್.ಎಸ್.ವಿಶ್ವನಾಥ, ಶಿವಮೊಗ್ಗ

## ವಿಶೇಷಣ

'ಉಗ್ರ'ವಾದಿ ಬೇಡಿ (ಸೆಲೆಬ್ರಿಟಿ). ಬರಹದಲ್ಲೊಂದು ಕಡೆ 'ಈ ಎದೆಗಾತಿ' ಎನ್ನಲಾಗಿದೆ. ಆ ಶಬ್ದಕ್ಕೀಗ ಬೇರೆಯೇ ಅರ್ಥ ಪ್ರಾಪ್ತವಾಗಿದೆ (ಸಿನಿಮಾ ತಾರೆಯರಿಗೆ ಸಂಬಂಧಿಸಿದಂತೆ!) ಪಾಪ, ಕಿರಣ್ ಬೇಡಿಯವರಿಗೇಕೆ ಆ (ಕೆಟ್ಟ) ವಿಶೇಷಣ? 'ಧೈರ್ಯಗಾತಿ' ಎನ್ನೋಣ.

–ಸಿಪಿಕೆ, ಮೈಸೂರು

## ಸಂಡೂರಿಗೆ ಹೋಗುವ ಆಸೆ

'ಗಣಿ ನಿಂತು ಹೋದ ಮೇಲೆ' ಸ್ವರೂಪಾನಂದ ಎಂ. ಕೊಟ್ಟೂರು ಅವರ ಲೇಖನ ಓದಿ ಸಂಭ್ರಮಿಸಿದೆ. ಮತ್ತೆ ಪ್ರಕೃತಿ ಹಸಿರಾಗುವಂತೆ ಮಾಡಿದ ಸುಪ್ರೀಂಕೋರ್ಟ್ ಆದೇಶಕ್ಕೆ ಧನ್ಯವಾದಗಳು. ಕೂಡಲೇ ಸಂಡೂರಿಗೆ ಹೋಗಬೇಕೆಂಬ ಆಸೆಯಾಗಿದೆ.

–ಸು. ವಿಜಯಲಕ್ಷ್ಮಿ ಶಿವಮೊಗ್ಗ/ಎಂ.ಎಲ್. ಲಕ್ಷ್ಮಣರಾವ್, ದಾವಣಗೆರೆ/ ಕೆ.ಸಿ. ಸತ್ಯನಾರಾಯಣ, ದೊಡ್ಡಬಳ್ಳಾಪುರ/ಕೊಹಿಮ, ಬಸರಕೋಡು/ ರವೀಂದ್ರನಾಥ ಯಡಹಳ್ಳಿ, ಬೀಳಗಿ

## ಸರಳ ಸುಂದರ 'ಸುಧಾ'

ವಿಚಾರ ಲಹರಿಯಲ್ಲಿ ವೈನತೇಯರ 'ಕುರುಡು ಕಾಂಚಾಣ' ಇಷ್ಟಪಟ್ಟು ಓದಿಸಿಕೊಳ್ಳುವಂತಹ ಲೇಖನ.

'ಮಾತೇ ಮುತ್ತು'ನಲ್ಲಿನ ಮಾಣಿಕ್ಯಗಳಲ್ಲಿ ಒಂದನ್ನೂ ಕಳೆದುಕೊಳ್ಳಲು ಮನಸ್ಸು ಬಾರದು.

'ನೀವು ಕೇಳಿದಿರಿ?'ನಲ್ಲಿನ ಉತ್ತರಗಳಂತೂ ಒಂದಕ್ಕಿಂತ ಒಂದು ಅದ್ಭುತ. ಮೂರು ಪತ್ರಗಳಿಗೆ ವ್ಯಂಗ್ಯ ಚಿತ್ರಗಳು, ಒಂದಕ್ಕೆ ಬಹುಮಾನ ಎದ್ದು ಕಾಣುವಂತಿದೆ. 'ರಾಮ್' ಚತುರತೆ ಮರೆಯುವಂತಿಲ್ಲ.

ಸಮುದ್ರ ಮಥನ'ದಲ್ಲಿ ಸಿ.ಪಿ.ಕೆ.ಯವರ ಪತ್ರ ಬಹುಮಟ್ಟಿಗೆ ಇದ್ದೇ ಇರುತ್ತದೆ.

'ಕಾರ್ಟೂನ್'ನ ಹ್ಯಾಪಿ ದೀಪಾವಳಿಯಲ್ಲಿ ಮೋಂಬತ್ತಿಯನ್ನು ಪ್ರದರ್ಶಿಸಿರುವುದು ಶಾಂತಿಯ ಸಂಕೇತವನ್ನು ತೋರುತ್ತಿದೆ.

'ಎಳೆಯರ ಅಂಗಳ'ದಲ್ಲಿದೆ ಸರ್ವಮಂಗಳ; ಇದು ಸರಳ ಸುಂದರ ನೈದಿಲೆಗಳ ಕೊಳ.

–ಕೆ.ಎಸ್. ಚಂದ್ರಶೇಖರಯ್ಯ, ಚಾಂಪಲ್ಲಿ

## ಅದೃಷ್ಟ ಅಲ್ಲ, ಶಕ್ತಿವಂತ

ಅ. 27ರ ವಿಚಾರ ಲಹರಿ ಅಂಕಣದಲ್ಲಿ ವೈನತೇಯರು 'ದೈವುಳ್ಳವರು' ಎಂಬ ಶಬ್ದದ ಅರ್ಥ ಅದೃಷ್ಟಶಾಲಿಗಳೆಂದು ತಪ್ಪಾಗಿ ಗ್ರಹಿಸಿದ್ದಾರೆ. ಆದರೆ, ಈ ಶಬ್ದದ ಅಭಿಪ್ರಾಯ ಧನವಾನರೆಂದೂ, ಶಕ್ತಿವಂತರೆಂದೂ ಆಗುತ್ತದೆ.

–ಪ್ರಕಾಶ ಪರ್ವತೀಕರ, ತಿರಪೂರ, ತಮಿಳುನಾಡು

## ಕತಿ ಚಲೋ ಇತ್ರಿ

ಹನುಮಂತ ಹಾಲಿಗೇರಿಯವರ 'ಹಾಲಿನ ಡೈರಿ ಮತ್ತು ಪ್ರಣಯ' ಕತಿ, ಮತ್ತ ಅದಕ್ಕ ಬಳಸಿದ ಉತ್ತರ ಕರ್ನಾಟಕದ ಆಡುಭಾಷೆ ಚಲೋ ಇತ್ರಿ. ಇನ್ನೂ ಓದಬೇಕು ಅನ್ನುವಾಗಲೇ ಕಥೆ ಮುಗಿದದ್ದು ಸ್ವಲ್ಪ ನಿರಾಶೆ ಆತ್ರಿ.

–ಬಿ.ಎಸ್.ಮುಳ್ಳೂರ, ಹಲಗತ್ತಿ

## ಜಂಗಮ ಅಷ್ಟೇ ಅಲ್ಲ, 'ಸ್ಥಿರ'ವೂ ಆಕರ್ಷಕ

ನೀವು ಕೇಳಿದಿರಿ, ವಿಚಾರ ಲಹರಿ, ಮಾತೇ ಮುತ್ತು, ಜಾಣರ ಪೆಟ್ಟಿಗೆ, ನಿಮ್ಮ ಪುಟ, ಫ್ಯಾಷನ್ ಪುಟಗಳು, ಎಳೆಯರ ಅಂಗಳ ಮುಂತಾದ ಸ್ಥಿರ ಶೀರ್ಷಿಕೆಗಳ ಬರಹಗಳು ಆಕರ್ಷಕವಾಗಿವೆ. ಇವೆಲ್ಲ ನಮ್ಮ ನೆಚ್ಚಿನ 'ಸುಧಾ' ಪತ್ರಿಕೆಯ ಹೆಚ್ಚುಗಾರಿಕೆ.

–ಅಮೃತೇಶ್ ತಂಡರ, ಅಣ್ಣಿಗೇರಿ

## ಪುಸ್ತಕ ಮುನ್ನುಡಿಯ ಮಾದರಿ

'ಸಮುದ್ರ ಮಥನ' ವಿಭಾಗ ನನ್ನ ಮೆಚ್ಚಿನ ವಿಭಾಗ. ಒಂದು ಉತ್ತಮ ಪುಸ್ತಕದ ಮುನ್ನುಡಿಯನ್ನು ಓದುವಷ್ಟು ಆಸಕ್ತಿಯಿಂದ ಓದುವ ಕಾಲಂ ಇದು. ಮುಂಚಿನಂತೆ 'ಸಮುದ್ರ ಮಥನ' ವಿಭಾಗವನ್ನು ಇನ್ನಷ್ಟು ವಿಸ್ತರಿಸಿ.

–ಪದ್ಮಾ ಶ್ರೀಧರ್, ಬೆಂಗಳೂರು

## ಎಲ್ಲರೂ ಓದುವ ಅಂಕಣ

'ಸುಖೀಭವ' ಅಂಕಣದಲ್ಲಿ ಸಲಹೆ ಕೇಳುವವರಲ್ಲಿ ಅನೇಕರು ಸ್ಪಷ್ಟವಾಗಿ ಹುಚ್ಚ, ಹುಚ್ಚಿಯರು. ಇಂಥ ಮನೋರೋಗಿಗಳ ಪ್ರಶ್ನೆಗಳಿಗೆ ಉತ್ತರಿಸುವುದು ಬೇಡ ಎಂದಿದ್ದಾರೆ ಮೈಸೂರಿನ ಸಿಪಿಕೆ. ಸಲಹೆ ಕೇಳುವವರು ಹುಚ್ಚ, ಹುಚ್ಚಿಯರಾಗಿರಬಹುದು. ಆದರೆ ಸಲಹೆ ನೀಡುವವರು ಹುಚ್ಚರಲ್ಲವಲ್ಲ! ಅದನ್ನು ಓದುವ ಓದುಗರಂತೂ ಹುಚ್ಚರಲ್ಲಲ್ಲವೇ ಅಲ್ಲ! ಸಿ.ಪಿ.ಕೆ. ಸೇರಿದಂತೆ ಸಲಹೆ ಕೇಳದವರೂ ಸಹ ಈ ಅಂಕಣವನ್ನು ಓದುತ್ತಾರೆಂದ ಮೇಲೆ ಅಂಕಣದ ಜನಪ್ರಿಯತೆ ಎಷ್ಟಿರಬೇಕು?

–ಪಿ.ಜೆ. ರಾಘವೇಂದ್ರ, ಮೈಸೂರು

### ಸಂಚಯ ಸಾಹಿತ್ಯ ಸ್ಪರ್ಧೆ

ಸಂಚಯ ಸಾಹಿತ್ಯ ಪತ್ರಿಕೆಯು ಕನ್ನಡದ ವಿವಿಧ ಸಾಹಿತ್ಯ ಪ್ರಕಾರಗಳಲ್ಲಿ ಸ್ಪರ್ಧೆಗಳನ್ನು ಆಯೋಜಿಸಿದೆ.

ಕಾವ್ಯ ಸ್ಪರ್ಧೆಗೆ ತಮ್ಮ ಸ್ವಂತ ರಚನೆಯ ಎರಡು ಕವಿತೆಗಳನ್ನು ಕಳುಹಿಸಿ. ಕೆಳಗಿನ ಮೂರು ವಿಷಯಗಳಲ್ಲಿ ಯಾವುದಾದರೂ ಒಂದು ವಿಷಯದ ಕುರಿತ ಹದಿನೈದು ಪುಟಗಳನ್ನು ಮೀರದ ಒಂದು ಲೇಖನ ಕಳುಹಿಸಿ. ವಿಷಯಗಳು: 1. ಅಣ್ಣಾ ಹಜಾರೆ ಭ್ರಷ್ಟಾಚಾರದ ವಿರುದ್ಧದ ಹೋರಾಟ– ಸಾಧ್ಯತೆ– ಸವಾಲು– ಮಿತಿಗಳು 2. ಚಂದ್ರಶೇಖರ ಕಂಬಾರರ ಕೃತಿಯೊಂದರ ವಿಮರ್ಶೆ 3. 'ನನ್ನ ಹರೆಯದ ಸಾಹಸಗಳು' ಒಂದು ಲಲಿತ ಲಹರಿ.

ಡಿ.5ರ ಒಳಗಾಗಿ ಸಂಚಯ, ನಂ.100, 2ನೇ ಮುಖ್ಯರಸ್ತೆ, 6ನೇ ಬ್ಲಾಕ್, 3ನೇ ಘಟ್ಟ ಬನಶಂಕರಿ 3ನೇ ಹಂತ, ಬೆಂಗಳೂರು–560 085 ವಿಳಾಸಕ್ಕೆ ಬರಹಗಳನ್ನು ಕಳಿಸಬಹುದು. ಮಾಹಿತಿಗೆ: 98440 63514


ಶ್ರೀ ಪಂಚಮುಖಿ ಜ್ಯೋತಿಷ್ಯಂ



INDIA'S MOST POPULAR ASTROLOGER

ಪಂಡಿತ. ಶ್ರೀ ಗಣೇಶ್ ಕುಮಾರ್ ಶ್ರೀ ಶ್ರೀ ಹನುಮಾನ್ ಆರಾಧಕರು

ಕೇರಳ, ಕಲ್ಕತ್ತಾದ ಸಾವಿರಾರು ವರ್ಷಗಳ ಹಿಂದಿನ ಪ್ರಾಚೀನ ನಾಡಿಗ್ರಂಥ ಆಧಾರದಿಂದ ಸರ್ವಮಂತ್ರ ವಿದ್ಯೆ, ಜ್ಯೋತಿಷ್ಯ ಶಾಸ್ತ್ರ



ಪಂಚಮಹಾಗುರುಗಳ ಬೋಧನೆಯಿಂದ ಯೋಗ ಯಜ್ಞಗಳ ಮೂಲಕ ಸರ್ವ ವಿದ್ಯೆಯನ್ನು ತಮ್ಮ ವಶದಲ್ಲಿರಿಸಿಕೊಂಡಿರುವವರು. ವಶೀಕರಣ, ಮದುವೆ, ಸಂತಾನ, ದಾಂಪತ್ಯ, ಪ್ರೇಮವಿಚಾರ, ಲೈಂಗಿಕ, ಮಾನಸಿಕ, ಗೃಹಶಾಂತಿ, ವಿದ್ಯೆ, ಆರೋಗ್ಯ, ವಿದೇಶ ಪ್ರಯಾಣ, ಹಣಕಾಸು, ವ್ಯಾಪಾರ,ಉದ್ಯೋಗ, ಕೋರ್ಟ್ ಕೇಸು, ಸಾಲಬಾಧೆ, ಮಾಟಬಾಧೆ, ಶತ್ರುಕಾಟ, ಅಲ್ಲದೆ ರಾಜಯೋಗ ವಶ ಮತ್ತು ಅಖಂಡ ಯೋಗವಶಗಳು, ಇನ್ನಿತರ ನಿಮ್ಮ ಯಾವುದೇ ಕಠಿಣ, ನಿಗೂಢ ಮತ್ತು ಗುಪ್ತ ಸಮಸ್ಯೆಗಳಿಗೆ, ಸಲಹೆ ಮತ್ತು ಪರಿಹಾರ ಶತಸಿದ್ಧ.

600 ವರ್ಷ ಹಳೆಯ ಪಂಚಸಿದ್ಧಿ ತಂತ್ರಗಳಿಂದ ನಿಮ್ಮ ದುಶ್ಚಟ, ದೀರ್ಘಾವಧಿ, ಲೈಂಗಿಕ, ಸಂತಾನ, ಸಮಸ್ಯೆಗಳಿಗೆ ಸನಾತನ ಪ್ರಕ್ರಿಯೆಗಳಿಂದ ಅತೀ ಶೀಘ್ರದಲ್ಲಿ ಸಮಗ್ರ ಪರಿಹಾರ ಕಲ್ಪಿಸುತ್ತಿರುವವರು.

ವಿ.ಸೂ.: ಇಲ್ಲಿ ಹೇಳುವ ವಿಷಯಗಳೆಲ್ಲವೂ ಗುಪ್ತವಾಗಿರುವುದರಿಂದ ನಿಮ್ಮ ಯಾವುದೇ ಸಮಸ್ಯೆಗಳನ್ನು ಹೇಳಲು ಹಿಂಜರಿಯಬೇಕಾಗಿಲ್ಲ. ದೂರವಾಣಿ ಹಾಗೂ ಪತ್ರದ ಮೂಲಕ ವಿವರಗಳನ್ನು ಪಡೆಯಬಹುದು.

ಬೆಂಗಳೂರು ಖಾಯಂ ಮನೆ ವಿಳಾಸ ನಂ.167/3, ಮೊದಲನೇ ಮಹಡಿ, 1ನೇ ಮುಖ್ಯರಸ್ತೆ, 9ನೇ ಅಡ್ಡರಸ್ತೆ, ಮುತ್ತುರಾಯಸ್ವಾಮಿ ದೇವಸ್ಥಾನದ ಹತ್ತಿರ, ಮೈಸೂರು ಸರ್ಕಲ್, (ಸಿರಸಿ ವೃತ್ತ), ಚಾಮರಾಜಪೇಟೆ, ಬೆಂಗಳೂರು–18.

ಸಮಸ್ಯೆ ಏನೇ ಇರಲಿ, ಎಷ್ಟೇ ಕಠಿಣವಾಗಿರಲಿ 600 ವರ್ಷಗಳ ಹಳೆಯ 108 ಜ್ಯೋತಿಷ್ಯ ತಂತ್ರಗಳಿಂದ ಮಹೋನ್ನತ ಪರಿಹಾರಗಳು.

ಮೈಸೂರು ಖಾಯಂ ಮನೆ ವಿಳಾಸ ನಂ.8949, ವಿಜಯನಗರ 4ನೇ ಸ್ಟೇಜ್, ಎಸ್.ಆರ್.ಎಸ್. ಗೇಟ್ ಹತ್ತಿರ, ಯಶಸ್ವಿನಿ ಕಲ್ಯಾಣಮಂಟಪದ ಹತ್ತಿರ, ಹುಣಸೂರು ರಸ್ತೆ, ಹೂಟಗಳ್ಳಿ, ಮೈಸೂರು–18.

ಬೆಂಗಳೂರು ಮೈಸೂರು 9880444450